
**7**

ಏ ಗಾಳಿ ಈಗ ನಿನ್ನ ಪಾಳಿ ತೋರಿಸು ಬಾ ಇನಿಯನೂರ ದಾರಿ
ಇರುಳು ಸುರಿದಿದೆ ನಾ ನಡೆವ ಹಾದಿ ಚಂದ್ರ ಮರೆಯಾದನು ಜಾರಿ
ಸರಿವ ಗಳಿಗೆಯು ಸಮನೆನಿಸಿದೆ ಯುಗದಂತೆ ಕಾದಿಹನು ಕಾಮಾರಿ
ಹರಿಸು ಪಯಣವೆ ಕನಿಕರಿಸು ಬೇಗ ಸೇರುವಂತೆ ನಲ್ಲನ ಅಭಿಸಾರಿ||
ನಳನಳಿಸೋ ಚಿಗುರು ಪರಿಮಳಿಸೋ ಹೂವು ವಸಂತವೇಕಿಷ್ಟು ಕ್ರೂರಿ
ತಳ ನೀರು ತುಳುಕಿ ತಲ್ಲಣಿಸೋ ತಾವರೆ ನೀರಾಚೆ ಇಹುದೆ ಕೇರಿ
ಕರಿ ಸಲಗವಾಗಿ ಧಾವಿಸಿದೆ ಮೋಡ ಕಣ್ಣಳಲಿ ಮಿಂಚು ತೂರಿ
ಹರಿಸೆನ್ನ ನೆಲವೆ ವರಿಸೆನ್ನ ಒಲವೆ ಈ ಯಾನ ಕೊನೆಯ ಬಾರಿ||
ಕ್ಷಣವೊಂದು ಯುಗವಾಗಿ ನಡೆವ ದಾರಿಯು ದೂರವಾದಂತೆ ದಿಗಿಲು
ಮಿಂಚೊಂದು ತಂತು ಕಾಳ ಕತ್ತಲೆಯನಿಂತು ಕೈ ಹಿಡಿವುದೇ ಮುಗಿಲು
ಕನಸೊಂದು ಬಂತು ಎದೆ ಪುಳಕ ತಂತು ಗರಿಬಿಚ್ಚಿ ಕುಣಿದ ನವಿಲು
ಗೆರೆ ದಾಟಿ ಬಂದೆ ಗುಡಿ ದಾಟಿ ನಿಂದೆ ಭೂಲೋಕದಿ ಪ್ರೇಮ ತಾ ಮಿಗಿಲು
ಸಿರಿತನವು ಬೇಡ ಗುರುತನವು ಬೇಡ ಬಡತನವೆ ಒಲವಿಗೆ ಹೆಗಲು
ಶಿವನೊಂದು ವಿರಹ ಸತಿಯೊಂದು ವಿರಹ ಸಂಗಮವೇ ಪ್ರೇಮ ಕಡಲು



**8**

ನೊಂದಿಹೆ ನೀನು ಒಳಗೆ ನಿಂದಿಹನು ಅವನಲ್ಲಿ ಹೊರಗೆ
ಬಾ ಎಂದಿದೆ ಮೈ ಬಾಯಾರಿದೆ ಹೋಗೆಂದು ಮನವು ಹಟ ಮಾಡಿದೆ||
ಬಣ್ಣಿಸಲು ನನ್ನ ಹೋಲಿಕೆ ಬೇಕೇನು ನವಿಲು
ನಾನು ರತಿಯಂತೆ ನನಗಿಂತ ಅವಳೇನು ಮಿಗಿಲು
ಚಂದ್ರಿಕೆ ನಾನಂತೆ ಚಂದ್ರಮ ಅವನಂತೆ ಸುಳ್ಳಾಡಬಹುದೇ ಮುಗಿಲು
ಸಾಗರವು ಗಂಡಂತೆ ನದಿ ನಾನು ಹೆಣ್ಣಂತೆ ಕೂಡಲಾರೆ ಕಲಗಚ್ಚು ಒಡಲು||
ತೆಗೆ ಮನಿಯ ಬಾಗಿಲಾ ನಾ ಮುನಿದು ಹೋಗಲಾ
ಹೋಗಲಾರೆ ನಿನ್ನ ಅಗಲಿ ಜೊತೆಗಿದೆ ಚಾವಡಿಯ ಜಗುಲಿ
ಬಾಗಿಲಿಗೆ ಬಂದು ಬೇಗಬಾಯೆಂದ ಮಾತು ಮರೆತಯೇನು
ಆಣೆ ಮರೆತಿಲ್ಲ ನಾನು ತಡವಾಗಲಡ್ಡಿ ನದಿ ಬೆಟ್ಟ ದಟ್ಟ ಕಾನು||
ಕರಗಲಿಲ್ಲವಳು ಕಲ್ಲಾದಳು ಕಾದವನು ಅಲ್ಲಿ ಗಡಿಯಾದನು
ನೋವಿನ ನದಿಯೊಂದು ದಡಗಳ ಸವಿಸಿ ಹರಿಯುತಿಹದು
ಹಗಲಿರುಳು ಉರುಳಿ ಪ್ರೇಮದ ವಯಸು ಸವೆಯುತಿಹದು
ಕೊರಡುಕೊನರಲಿ ಎಂದು ಸಡಗರಸಿ ವಸಂತ ಕಾಯುತಿಹುದು||

